Reg No. B G 155

12-3-1969

52 nd Year of Publication

SATYAVADI Daily, MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪಚ್ಚೆ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ... ಧರ್ಮಪ್ರಜಾಗಿರ್ ... ಎಸ್. ಕೃಷ್ಣರಾವ್ [2 ಪೈಸೆ

ಏಕರೀತಿಯ ಪಾನನಿರೋಧ ಶಾಸನ ಜಾರಿಗೆ ಬರಬೇಕು

ಮೈಸೂರು ನಜರಬಾದು ರಾಣಾ ಪ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ – ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ

ವಿವಿಧ ವಿನೋದಾವಳಿಗಳು

ಮಲಬಾರಿನ ನುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಜ್ಞಾಪನೆಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪಾನನಿರೋಧ

ನವದೆಹಲಿ.... ಎರಡು ದಿನಗಳು ನಡೆದ ಪಾನನಿರೋಧ ರಾಷ್ಟ್ರೀಯ ಸಮ್ಮೇನದಲ್ಲಿ ಕೇಂದ್ರ ಸರಕಾರವು ರಾಜ್ಯಾಂಗದ 47 ನೇ ಸೂತ್ರದಂತೆ ಒಂದೇ ರೀತಿಯ ಪಾನನಿರೋಧ ಶಾಸನವನ್ನು ಜಾರಿಗೆ ತರಬೇಕೆಂದು ಶಿಫಾರಸು ಮಾಡಲಾಯಿತು.

★

ಶಿವಸೇನಾ ನಾಯಕನ ಬಳಿ ಪಿಸ್ತೂಲ್

ಬೊಂಬಾಯಿ.... ಜನವರಿ 4 ರಂದು ನಾಗಪುರ ವಿಮಾನ ನಿಲ್ದಾಣದಲ್ಲಿ ಶಿವಸೇನಾ ನಾಯಕ ಬಾಲ ಥ್ಯಾಕರೆಯವರನ್ನು ವಿದ್ಯಾರ್ಥಿ ಪ್ರದರ್ಶನಕಾರರು ಸುತ್ತುಗಟ್ಟಿದಾಗ, ಥ್ಯಾಕರೆ ಹತ್ತಿರ ಪಿಸ್ತೂಲೂ, ಅವರ ಬಾಡಿ ಗಾರ್ಡು ಹತ್ತಿರ ಕೋಲಿನಲ್ಲಿ ಮುಚ್ಚಿದ್ದ ಚೂರಿ ಇತ್ತೆಂದು ಶಾಸನ ಸಭೆಯಲ್ಲಿ ಮುಖ್ಯಮಂತ್ರಿ ನಾಯಿಕ್ ತಿಳಿಸಿದರು - ಶಿವಸೇನಾ ಪ್ರಾವಳಿಯಿಂದ ರೂ. 41.78 ಲಕ್ಷ ಆಸ್ತಿ ಪಾಸ್ತಿ ನಷ್ಟವಾಯಿತೆಂದೂ, 91 ಹೋಟಲುಗಳೂ 201 ಅಂಗಡಿಗಳು ನಷ್ಟಗೊಂಡವೆಂದೂ ಹೇಳಿದರು.

●

ಚಾಮರಾಜನಗರ.... ಈ ತಾಲ್ಲೂಕಿನ ಉಡಿಗಾಲಾ ಗ್ರಾಮದಲ್ಲಿ ಅಗ್ನಿ ಅನಾಹುತದಿಂದ 20 ಜೋಪಡಿಗಳು 10 ಕುರಿ ಆಡುಗಳು, ಆಹಾರಧಾನ್ಯ, ಮನೆ ಪದಾರ್ಥಗಳು ಹಾಳಾದವು.

ಗಡಿ ವ್ಯಾಜ್ಯ

ಬೊಂಬಾಯಿ— ಮಹಾರಾಷ್ಟ್ರ–ಮೈಸೂರು ಗಡಿ ವ್ಯಾಜ್ಯದಲ್ಲಿ ರಾಜ್ಯ ಸರಕಾರದ ನಿಲುವಿನಲ್ಲಿ ಬದಲಾವಣೆ ಇಲ್ಲವೆಂದು ಮುಖ್ಯಮಂತ್ರಿ ಶ್ರೀ ನಾಯಿಕ್ ಶಾಸನ ಸಭೆಯಲ್ಲಿ ತಿಳಿಸಿದರು – ಕೇಂದ್ರ ಸರಕಾರವು ಈ ಸಮಸ್ಯೆ ಪರಿಹಾರಕ್ಕೆ ಯಾವ ಸಲಹೆ ನೀಡಿಲ್ಲವೆಂದೂ ಹೇಳಿದರು – ಈ ವಿಷಯ ಕೇಂದ್ರ ಸರಕಾರದ ಸರ್ವತೋಮುಖ ಪರಿಶೀಲನೆಯಲ್ಲಿದೆಯೆಂದೂ ಹೇಳಿದರು

★

ಒಂದು ಅಂಗುಲ ಹೆಚ್ಚು ಜಾಗ ಕೊಡುಲ್ಲ

ನವದೆಹಲಿ— ಕಚ್ ತೀರ್ಪಿನಂತೆ ಗಡಿ ಗುರ್ತುಹಾಕುವಾಗ ಪಾಕಿಸ್ತಾನಕ್ಕೆ ಭಾರತ ಭೂಮಿಯ ಒಂದು ಅಂಗುಲ ಹೆಚ್ಚು ಸ್ಥಳವನ್ನೂ ಕೊಡುವುದಿಲ್ಲವೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

★

ಸಾಂಕೇತಿಕ ಮುಷ್ಕರ

ಮಂಗಳೂರು.... ಸ್ಥಳೀಯ ಎರಡು ಗೇರುಪೊಪ್ಪು ಕಾರ್ಖಾನೆಯ ಸುಮಾರು 3 ಸಾವಿರ ಕಾರ್ಮಿಕರು ಹೆಚ್ಚು ಕೂಲಿ ಮತ್ತು ಭತ್ಯಕ್ಕೆ ಒತ್ತಾಯಮಾಡಲು ತಾ|| 17 ರಂದು ಸಾಂಕೇತಿಕ ಮುಷ್ಕರ ಹೂಡಲು ಸಿದ್ಧರಿಸಿರುವರು.

○

ಲಾಠಿ ಛಾರ್ಜು ಮಾಡಲಿಲ್ಲ

ಬೆಂಗಳೂರು ... ಫೆಬ್ರವರಿ 19 ರಂದು ತಾವು ಮತ್ತು ಕಾಂಗ್ರೆಸ್ ಅಧ್ಯಕ್ಷರು ಬೆಳಗಾಂಗೆ ಹೋಗುತ್ತಿದ್ದಾಗ ರಸ್ತೆಯಲ್ಲಿ ಅಡ್ಡಕಟ್ಟಿದ ಮಹಾರಾಷ್ಟ್ರ ಏಕೀಕರಣ ಯುವಕ ಸಂಘದವರ ಮೇಲೆ ಲಾಠಿ ಛಾರ್ಜು ಮಾಡಲಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ವಿರೇಂದ್ರ ಪಾಟೀಲರು ಶಾಸನಸಭೆಯಲ್ಲಿ ತಿಳಿಸಿದರು.

ಕಾರೀಫ್ ಬೆಳೆ

ಬೆಂಗಳೂರು— ವ್ಯವಸಾಯ ಇಲಾಖೆ ನಡೆಸಿದ ಕಾರೀಫ್ ಬೆಳೆ ಸ್ಪರ್ಧೆಯಲ್ಲಿ ಯಲ್ಲಿ ಎಕ್ರೆಗೆ 4736.2 ಕೆಜಿ ಬೆಳೆದ ತಿವಮೊಗ್ಗಾ ತಾಲ್ಲೂಕು ಹೊಸಹಳ್ಳಿ ಗ್ರಾಮದ ಶ್ರೀ ಹೆಚ್ ವಿ ಕೃಷ್ಣರಾಯರು ಬೆಳೆದು ರೂ. 1000 ಬಹುಮಾನ ಪಡೆದರು

●

ವಿದ್ಯಾರ್ಥಿಗಳ ಕಲ್ಯಾಣ ಮಂಡಲಿ

ಬೆಂಗಳೂರು— ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿಗಳೇತರ ಯುವಕರ ಹಿತಕರ ಚಟುವಟಿಕೆಗಳನ್ನು ಸುಸಂಘಟಿಸಲು ಯುವಕ ಕಲ್ಯಾಣ ಮಂಡಲಿ ಸ್ಥಾಪಿಸಲು ಸರಕಾರ ಯೋಜಿಸಿದೆಯೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಸಬ್ ಇನ್‌ಸ್ಪೆಕ್ಟರು

ಬೆಂಗಳೂರು— ಪೋಲೀಸು ಸಬ್ ಇನ್‌ಸ್ಪೆಕ್ಟರು ಸ್ಥಾನಕ್ಕೆ 588 ಅರ್ಜಿಗಳು ಬಂದವೆಂದೂ, 60 ಮಾತ್ರ ಆಯ್ಕೆ ಮಾಡಲಾಯಿತೆಂದೂ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಪರೀಕ್ಷಾ ಫಲಿತಾಂಶ

ಬೆಂಗಳೂರು— ಜನವರಿ ತಿಂಗಳಲ್ಲಿ ನಡೆದ ವಿಶ್ವವಿದ್ಯಾಲಯದ ಎರಡನೇ ಮತ್ತು ಕಡೇ ಎಂ ಬಿ ಬಿ ಎಸ್ ಪರೀಕ್ಷಾ ಫಲಿತಾಂಶವು ತಾ|| 1 ಬೆಳಿಗ್ಗೆ 7 ಗಂಟೆಗೆ ಪ್ರಕಟಿಸಲಾಗುವುದು.

ಬೆಂಗಳೂರು— ರಾಯಚೂರಿನ ಕಲೆಬೆಲೆದುಲ್ಲೆ ನಾರ್ಚ್ 7 ರಂದು ಆದ ಅಗ್ನಿ ಅನಾಹುತದಲ್ಲಿ 34 ಮನೆಗಳು ಸುಟ್ಟು ಹೋಗಿ ರೂ.20000 ನಷ್ಟವಾಯಿತೆಂದು ಮುಖ್ಯ ಮಂತ್ರಿಗಳು ಶಾಸನಸಭೆಯಲ್ಲಿ ತಿಳಿಸಿದರು.

ಕಾರು ಮತ್ತು ಸ್ಕೂಟರುಗಳಿಗೆ ಅರ್ಜಿ

ನವದೆಹಲಿ— ಕೇಂದ್ರ ಸರಕಾರದಲ್ಲಿ ಕಾರುಗಳು ನಿಗಿದಿಗೆ ಬಂದಿರುವ ಅರ್ಜಿಗಳಲ್ಲಿ 5500 ಇನ್ನೂ ತೀರ್ಮಾನವಾಗಿಲ್ಲವೆಂದೂ, ಸ್ಕೂಟರುಗಳ 24000 ಅರ್ಜಿಗಳು ತೀರ್ಮಾನವಾಗಿಲ್ಲವೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

ಚುನಾವಣಾ ದೂರುಗಳು

ನವದೆಹಲಿ— ಈಚೆಗೆ ನಡೆದ ಮಧ್ಯವರ್ತಿ ಚುನಾವಣಾ ಸಂಬಂಧದಲ್ಲಿ 170 ದೂರುಗಳು ಬಂದಿರುವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಹಾಕಿ ಸಂಘ

ಕೊಚ್ಚಿ— ವಿಶ್ವ ಹಾಕಿ ಸಂಘವನ್ನು ನಡೆಸಲು ಅಂತರಾಷ್ಟ್ರೀಯ ಹಾಕಿ ಸಂಘಕ್ಕೆ ಭಾರತ ಹಾಕಿ ಸಂಘದ ಕಾರ್ಯದರ್ಶಿ ಶ್ರೀ ಸೇಟ್ ಸಲಹೆ ಮಾಡಿದರು.

ಶ್ರೀ ಸಂಜೀವ್ ಸಾಲ ಕೇಳಿಲ್ಲ

ನವದೆಹಲಿ.... ಪ್ರಧಾನಿಯವರ ಮಗ ಶ್ರೀ ಸಂಜೀವ್ ರೂ. 1 ಕೋಟಿ ಸಾಲಕ್ಕೆ ಅರ್ಜಿ ಹಾಕಿಲ್ಲವೆಂದೂ, ಅವರು ಚಿಕ್ಕ ಕಾರು ತಯಾರಿಕೆಗೆ ಲೈಸನ್ಸಿಗಾಗಿ ಅರ್ಜಿ ಕೊಟ್ಟರುವ ವಿಷಯ ತಮಗೆ ಗೊತ್ತಿಲ್ಲವೆಂದೂ ಸ್ಟೇಟ್ ಅರ್ಥ ಮಂತಿ ಶ್ರೀ ಸೇಥಿ ರಾಜ್ಯ ಸಭೆಯಲ್ಲಿ ತಿಳಿಸಿದರು.



Protect the Cow

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ವುಡ್‌ಲ್ಯಾಂಡ್
ಜಯಪ್ರದ 2ನೇ ವಾರ
ಆನೋಘ ಆರಂಭ

— ಚಿತ್ತಾಕರ್ಷಕ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕಾ ಚಿರಾಗ್

ಪಾತ್ರ— ಧರ್ಮೇಂಧರ್, ಬಿಶ್ವಜಿತ್, ವಹಿದಾ ರಹಿಮಾನ್,
ಬಾಲರಾಜ್ ಸಹಾನಿ ದೇವ್ ಕುಮಾರ್
ನಿರ್ದೇಶನ : ಜಗದೀವ್ — ಸಂಗೀತ : ಏಸರ್ ಮೋಹನ್
[ದಿನ 3 ಪ್ರದರ್ಶನಗಳು]

ಆಪೆರಾ ಜನಪ್ರಿಯ 2ನೇ ವಾರ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನೆ ತೆರಿಗೆ ಮನ್ನಾ ಮಾಡಿದೆ — ಪರ್ಣರಂಜಿತ
ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್
.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI
SUDHA

A Superb Tonic

Help The Gorakshana

ಆಶೋಕ ಏಜೆನ್ಸೀಸ್

ಚಾಮರಾಜಪುರಂ ಬಿಲ್ಡಿಂಗ್ಸ್, ಮೈಸೂರು
ಸಕಲ ವಿಧದ ಪೆನ್ನುಗಳನ್ನೂ ಮಾರಲಾಗುವುದು

Edited Printed & Published by Dharmaprachara Niyata
M S Krishna Rao (Proprietor) at the Satyavadi Press
Chamarajapuram, Mysoe 4